# ಗುಡ್ಡದಜೀವಕ್ಕೆ ಪದ್ಮಶ್ರೀ ಬಾಗಿನ



**ಶಿವರಾಮ ಕಾರಂತರ 'ಬೆಟ್ಟದ ಜೀವ'ದ ಗೋಪಾಲಯ್ಯನಂತೆ ಕುದ್ದುಪದವಿನ ಮಹಾಲಿಂಗ ನಾಯ್ಕರು 'ಗುಡ್ಡದ ಜೀವ'. ಬೋಳು ಗುಡ್ಡದಲ್ಲಿ ಹಸಿರು ಕನಸನ್ನು ನನಸಾಗಿಸಿಕೊಂಡ, ನೀರಿಗಾಗಿ ಸುರಂಗ ಕೊರೆದ ನಾಯ್ಕರು ಶ್ರಮವನ್ನು ನೆಚ್ಚಿದವರು. ಅವರೀಗ ದೇಶ ಮೆಚ್ಚಿದ ಸಾಧಕ, ಪದ್ಮಶ್ರೀ ಪುರಸ್ಕೃತ.**

■ ನಾ. ಕಾರಂತ ಪೆರಾಜೆ

ನಲವತ್ತಮೂರು ವರುಷದ ಹಿಂದೆ – ಸ್ವಂತದ್ದಾದ ಜಮೀನಿಲ್ಲ, ಸೂರಿಲ್ಲ. ಬಾಲ್ಯದಲ್ಲಿರುವಾಗಲೇ ತಂದೆಯ ಮರಣ. ಶಾಲಾ ಕಲಿಕೆಯಿಲ್ಲ. ಯೌವನದಲ್ಲಿ ಮನೆಯ ಜವಾಬ್ದಾರಿ. ಆರಿಸಿಕೊಂಡದ್ದು ಕೂಲಿ ಕೆಲಸ. ದುಡಿತ ಅನಿವಾರ್ಯ. ದುಡಿದರೆ ಮಾತ್ರ ಹೊಟ್ಟೆ ತಂಪಾಗುತ್ತದೆ. ತಲೆಗಿದ್ದರೆ ಕಾಲಿಗಿಲ್ಲ. ನಗುವಿಲ್ಲದ ಒತ್ತಡದ ಬದುಕು.

ಆರಂಭದ ಕಾಲಘಟ್ಟದ ಅಮೈ ಮಹಾಲಿಂಗ ನಾಯ್ಕರ (74) ಬದುಕಿನ ಚಿತ್ರಣವಿದು. ಈಗವರಿಗೆ ರಾಷ್ಟ್ರೀಯ ಸಮ್ಮಾನ. ಪದ್ಮಶ್ರೀ ಪ್ರಶಸ್ತಿಯ ಬಾಗಿನ. ಕನ್ನಾಡಿನ ಕೃಷಿಲೋಕದಲ್ಲೀಗ ಅವರೊಬ್ಬ ಐಕಾನ್. ನಾಯ್ಕರ ಬೆವರಿನ ಶ್ರಮಕ್ಕೆ ಈಗ ಬೆಲೆ ಬಂದಿದೆ. ಸಾಧಿಸುವುದಕ್ಕೆ 'ಕಾಂಚಾಣವೊಂದೇ ಮಾನದಂಡ'ವೆಂಬ ಮಾತನ್ನು ಮಹಾಲಿಂಗ ನಾಯ್ಕರು ಹುಸಿಗೊಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕೇಪು ಗ್ರಾಮದ ಕುದ್ದುಪದವು ಸನಿಹದ 'ಅಮೈ'ಯಲ್ಲಿ ವಾಸ. ಆ ದಿನವನ್ನು ನಾಯ್ಕರು ಜ್ಞಾಪಿಸಿಕೊಂಡರು: 'ನನ್ನ ಬಡತನ ಮತ್ತು ಕಾಯಕಕಷ್ಟವನ್ನು ನೋಡಿದ ಅಮೈ ಮಹಾಬಲ ಭಟ್ಟರು ಎರಡೆಕ್ರೆ ಮುಳಿಹುಲ್ಲು (ಕರಡ) ಗುಡ್ಡವನ್ನು ದರ್ಖಾಸ್ತು ರೂಪದಲ್ಲಿ ನೀಡದೇ ಇರುತ್ತಿದ್ದರೆ ನನ್ನ ಹೆಸರು ಓಟರ್ ಲಿಸ್ಟಿನಲ್ಲಿ ಮಾತ್ರ ಇರುತ್ತಿತ್ತಷ್ಟೇ. ಈಗವರಿಲ್ಲ. ಇದ್ದರೆ ಖುಷಿ ಪಡುತ್ತಿರುವವರಲ್ಲಿ ಮೊದಲಿಗರಾಗುತ್ತಿದ್ದರು.'

## ಭಾರವಾಗದ ಕಲ್ಲುಗಳು!

ಅಂದು ಪ್ರಾಪ್ತವಾದ ಎರಡೆಕರೆಯ ಇಳಿಜಾರು ಗುಡ್ಡದ ಮೇಲೆ ನಾಯ್ಕರು ನಿಂತಾಗ 'ಇಲ್ಲಿ ಬದುಕಲು ಸಾಧ್ಯವಾ' ಅಂತ ಪ್ರಶ್ನೆ ಮೂಡಿತ್ತು? ಮುಳಿಹುಲ್ಲು ಹೊರತು ಮರ–ಗಿಡಗಳಿಲ್ಲ, ಪೊದರುಗಳಿಲ್ಲ, ನೀರಿಲ್ಲ. ಸಮತಟ್ಟು ಮಾಡದೆ ಅಭಿವೃದ್ಧಿ ಸಾಧ್ಯವಿಲ್ಲ. ಈ 'ಇಲ್ಲ'ಗಳು ಛಲದ ರೂಪದಲ್ಲಿ ನಾಯ್ಕರನ್ನು ಆವರಿಸಿತು. 'ಈ ಭೂಮಿಯಲ್ಲೇ ನನ್ನ ಬದುಕು ನೆಲೆಯಾಗಬೇಕು' ಎಂಬ ಕನಸನ್ನು ಕಟ್ಟಿಕೊಂಡರು. ಮೊದಲಿಗೆ ಗುಡ್ಡದ ತುದಿಯಲ್ಲಿ ತೆಂಗಿನ ಗರಿಗಳ ಸೂರಿನ ಚಿಕ್ಕ ಮನೆ ಮಾಡಿಕೊಂಡರು.

ದಿನದರ್ಧ ಕೂಲಿ ಕೆಲಸ. ಉಳಿದರ್ಧ ದಿವಸ ಗುಡ್ಡವನ್ನು ಸಮತಟ್ಟುಗೊಳಿಸಲು ಮೀಸಲು.

### ಮೊಮ್ಮಕ್ಕಳೀಗ ನಾಯಕರ ಸೆಕ್ರೆಟರಿ!

ಅಮೈ ಮಹಾಲಿಂಗ ನಾಯ್ಕರಿಗೆ ಪದ್ಮಶ್ರೀ ಪ್ರಶಸ್ತಿ ಘೋಷಣೆಯಾದ ಬಳಿಕ ಅವರ ಮೊಬೈಲ್, ಲ್ಯಾಂಡ್‌ಲೈನ್ ಫೋನಿಗೆ ವಿಶ್ರಾಂತಿಯಿಲ್ಲ. ಮೊಬೈಲ್ ರಿಂಗಾದರೆ 'ಹಲೋ' ಅನ್ನುವಾಗಲೇ ನೆಟ್‌ವರ್ಕ್ ಕಟ್! ಅಂಗಳದಂಚಿನಲ್ಲಿ ಕೇರಳದ ನೆಟ್‌ವರ್ಕ್ ಸ್ವಲ್ಪ ಸಿಗುತ್ತದೆ.

ನಾಯ್ಕರ ಮೊಮ್ಮಗಳು ದಿವ್ಯಶ್ರೀ, ಮೊಮ್ಮಗ ಉದಯ ಇವರಿಬ್ಬರ ಕೈಯಲ್ಲೀಗ ನೋಟ್‌ಪ್ಯಾಡ್ ಮತ್ತು ಪೆನ್! ಅಜ್ಜನಿಗೆ ಅಪಾಯಿಂಟ್‌ಮೆಂಟ್ ಕೊಡುವ ಸೆಕ್ರೆಟರಿಗಳವರು. ಫೋನ್ ಮಾಡಿದವರ ಹೆಸರು, ಫೋನ್ ನಂಬರ್‌ಗಳನ್ನು ಅಜ್ಜನಿಗೆ ತಿಳಿಸಿ, ಅವರ ಒಪ್ಪಿಗೆ ಪಡೆದು ಮರು ಉತ್ತರ ನೀಡುತ್ತಾರೆ. 'ಅನಕ್ಷರಸ್ಥರಾದ ಅಜ್ಜ–ಅಜ್ಜಿಗೆ ಈಗ ಸಹಾಯಕರು ಬೇಕು' ಅನ್ನುತ್ತಿದ್ದಂತೆ ದಿವ್ಯಶ್ರೀ ಮೌನವಾಗುತ್ತಾಳೆ.



ನಾಯ್ಕರ ಸೆಕ್ರೆಟರಿ ಮೊಮ್ಮಗಳು ದಿವ್ಯಶ್ರೀ